ಅಸಲು ದಾವಾ ನಂಃ 418/2017

ಪಿ.ಡಬ್ಲೂಃ 02

ಸತ್ಯ ಪ್ರತಿಜ್ಞೆಯ ಮೇರೆಗೆ, ದಿನಾಂಕಃ 13/09/2022

* * *

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ.**17** ರಿಂದ **19** ಪರ ವಕೀಲರಾದ ಶ್ರೀ ಆರ್ ಎಲ್ ಪಿ ರವರಿಂದಃ

ಸರ್ವೆ ನಂ.489/2 ರ ಕ್ಷೇತ್ರ 12 ಎಕರೆ ಜಮೀನಿನ ಚಕಬಂದಿ ಪೂರ್ವಕ್ಕೆ ಸತ್ಯಪ್ಪ ಕೊಣ್ಣೂರ ರವರ ಜಮೀನು, ಪಶ್ಚಿಮಕ್ಕೆ ದುಂಡಪ್ಪ ತಿಪ್ಪಣ್ಣನವರ ಹುಲ್ಯಾಳ ರವರ ಜಮೀನು, ದಕ್ಷಿಣಕ್ಕೆ ಸವದಿ ರಸ್ತೆ, ಉತ್ತರಕ್ಕೆ ಖೋತ ರವರ ಜಮೀನು. ಅವರ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ನದಾಫ ರವರಿಗೆ ಖರೀದಿ ಪತ್ರ ಆಗುವ ಸಮಯದಲ್ಲಿ ನಾನು ಹೋಗಿರಲಿಲ್ಲ. ಅಸಲು ದಾವಾ ನಂ.330/2000 ರಾಜಿ ಆಗುವ ಸಮಯದಲ್ಲಿ ನಾನು ನ್ಯಾಯಾಲಯಕ್ಕೆ ಬಂದಿದ್ದೀರ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಪ್ರತಿವಾದಿ ನಂ.17 ರಿಂದ 19 ರವರಿ ಪರಿಚಯ ನನಗೆ ಇದೆ. ಸದರಿಯವರು ದಾವಾ ಸ್ವತ್ತನ್ನು ದಿನಾಂಕ 23-09-2005 ರಂದು ರೂ.2,64,000/- ಗಳಿಗೆ ಖರೀದಿಗೆ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಸರ್ವೆ ನಂ.489/2 ರ 12 ಎಕರೆ ಜಮೀನಿನ ಚಕಬಂದಿ ಬರೆಸಿರುತ್ತೇನೆ. ನೀವು ಆ ರೀತಿ ಬರೆಸಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ 1/3 ಅಂಶ ಹಿಸ್ಸೆ ಇದೆ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಯಾವ ದಾಖಲೆ ಪ್ರಕಾರ ವಾದಿಗೆ 1/3 ಅಂಶ ಹಿಸ್ಸೆ ಬರುತ್ತದೆ ಅಂತ ಬರೆಸಿದ್ದೀರಿ ಎಂದರೆ ಸಾಕ್ಷಿಯು 6 ಎಕರೆ ಜಮೀನಲ್ಲಿ 3 ಜನರಿಗೆ ಪಾಲು ಬರುತ್ತದೆ ಅಂತ ಬರೆಸಿದ್ದೇನೆ ಎನ್ನುತ್ತಾರೆ. 3 ಜನ ಎಂದರೆ ಶ್ಯಾಮು, ಲಕ್ಷ್ಮಣ ಮತ್ತು ರಾಮು. ಸದರಿ 3 ಜನ ಬುದ್ದಿವಂತ ರವರ ಮಕ್ಕಳು. ಈ 3 ಜನ ಬುದ್ದಿವಂತ ರವರ ಮಕ್ಕಳು ಎನ್ನಲು ವಾರಸಾ ಪತ್ರವನ್ನು ನೋಡಿರುವುದಿಲ್ಲ. ಸದರಿ 3 ಜನರು ಯಾವಾಗ ಮರಣ ಹೊಂದಿದ್ದಾರೆ ಎನ್ನುವುದು ನನಗೆ ನಿಖರವಾದ ದಿನಾಂಕ ನನಗೆ ಗೊತ್ತಿಲ್ಲ. ಆದರೆ ಅವರ ಮರಣ ಪ್ರಮಾಣ ಪತ್ರ ಬೇಕಾದರೆ ಹಾಜರ ಪಡಿಸುತ್ತೇನೆ.

ಶ್ಯಾಮು ರವರ ಹೆಂಡತಿ ಹೆಸರು ರಾಮಕ್ಕ, ಲಕ್ಷ್ಮಣ ರವರ ಹೆಂಡತಿ ಹೆಸರು ವಿಠಾಬಾಯಿ, ರಾಮು ರವರ ಹೆಂಡತಿ ಹೆಸರು ರತ್ನವ್ವ. ಬುದ್ದಿವಂತ ರವರಿಗೆ 4 ಜನ ಮಕ್ಕಳು ಅಂತ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಶ್ಯಾಮು ರವರಿಗೆ 4 ಜನ ಗಂಡು ಮಕ್ಕಳು ಮತ್ತು ಎರಡು ಜನ ಹೆಣ್ಣು ಮಕ್ಕಳು ಅಂತ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೆ. ಆ ಕುರಿತು ನಾನು ವಾರಸಾ ಪ್ರಮಾಣ ಪತ್ರವನ್ನು ನೋಡಿರುತ್ತೇನೆ. ಸದರಿ ವಾರಸಾ ಪ್ರಮಾಣ ಪತ್ರವನ್ನು ವಾದಿ ನ್ಯಾಯಾಲಯಕ್ಕೆ ಹಾಜರ ಪಡಿಸಿದರ ಬಗ್ಗೆ ನನಗೆ ಮಾಹಿತಿ ಇಲ್ಲ. ವಾರಸಾ ಪ್ರಮಾಣ ಪತ್ರವನ್ನು ನನಗೆ ಶ್ಯಾಮುವಿನ ಮಕ್ಕಳು ತೋರಿಸಿರುತ್ತಾರೆ. ಸದಾಶಿವ ರವರು ಬುದ್ದಿವಂತ ರವರ ಮಗ. ಸದರಿಯವನು ಗುರುಲಿಂಗ ಹುಲ್ಯಾಳ ರವರಿಗೆ ದತ್ತಕ ಹೋಗಿರುತ್ತಾನೆ. ಈ ವಿಚಾರವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.ನಾನು ದತ್ತಕ ಪತ್ರವನ್ನು ನೋಡಿರುವುದಿಲ್ಲ.

ಅಸಲು ದಾವಾ ನಂ.74/2006 ರಲ್ಲಿ ನೀವು ಸಾಕ್ಷಿ ನುಡಿದ್ದೀರಾ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ಸಂಬಂದಿಸಿದಂತೆ ಎಷ್ಟು ದಾವೆ ಇವೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಮೇಲ್ಕಂಡ ದಾವೆಯಲ್ಲಿ ಈ ಮೊದಲು ಸಾಕ್ಷಿ ಹೇಳಿದ್ದೀರಿ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂ.17 ರಿಂದ 19 ರವರು ದಾವಾ ಆಸ್ತಿಯನ್ನು ಖರೀದಿಸುವಾಗ ಅದು ಯಾರ ಹೆಸರಿನಲ್ಲಿತ್ತು ಎಂದು ನನಗೆ ನೆನಪಿಲ್ಲ. 2005 ರಿಂದ ಇಲ್ಲಿಯವರಿಗೂ ದಾವಾ ಆಸ್ತಿ ಪ್ರತಿವಾದಿ ನಂ.17 ರಿಂದ 19 ರವರ ಹೆಸರಿನಲ್ಲಿದೆ. ಪ್ರತಿವಾದಿ ನಂ.17 ರಿಂದ 19 ರವರು ಏನು ಬೆಳೆಯನ್ನು ಬೆಳೆಯುತ್ತಾರೆ ಎಂದರೆ ಸಾಕ್ಷಿಯು ಕಬ್ಬು ಬೆಳೆಯುತ್ತಾರೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ಬೆಳೆಯನ್ನು ಸುರೇಶ, ಬುದ್ದಿವಂತ, ಮಾರುತಿ ಬೆಳೆಯುತ್ತಾರೆ ಎನ್ನುತ್ತಾರೆ. ಪ್ರತಿವಾದಿ ನಂ.17 ರಿಂದ 19 ರವರು ದಾವಾ ಆಸ್ತಿಯಲ್ಲಿ ಕಬ್ಬು ಬೆಳೆಯುತ್ತಾ ದಾವಾ ಆಸ್ತಿಯಲ್ಲಿ ಕೊಳವೆ ಬಾವಿ ತೆಗೆಸಿ ಅದರ ವಿದ್ಯುತ ಸಂಪರ್ಕವನ್ನು ಪಡೆದಿರುತ್ತಾರೆ ಮತ್ತು ಸರ್ಕಾರಿ ಪಾಳೆಯನ್ನು ಸಹ ಅವರೇ ತುಂಬುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ವಾದಿಯು ವಾದ ಪತ್ರದಲ್ಲಿ ನನಗೆ ಅನ್ಯಾಯವಾಗಿದೆ ಭೂಮಿ ಕೊಡಿ ಅಂತ ಕೇಳಿಕೊಂಡಿದ್ದಾಳೆ. ಸದರಿ ವಿಚಾರವನ್ನು ನಿಮ್ಮ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರ ಎಂದರೆ ಸಾಕ್ಷಿಯು ಬರೆಸಿದ್ದೇನೆ ಎನ್ನುತ್ತಾರೆ. ಸುರೇಶ ರವರಿಗೆ ಅನುಕೂಲವಾಗಲಿ ಅಂತ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.330/2000 ಕಾನೂನು ಪ್ರಕಾರ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ಆ ಡಿಕ್ರಿಯನ್ನು ರದ್ದು ಗೊಳಿಸಲು ದಾವೆಯನ್ನು ದಾಖಲಿಸಿದ್ದಾರಾ? ಎಂದರೆ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂ.4 ರಲ್ಲಿ ಬರೆದಿರುವ ಮೂಲ ಪುರುಷನ ವಂಶಾವಳಿ ಕುರಿತು ಮಾಹಿತಿಯನ್ನು ನಾನು ಚುನಾವಣಾ ಗುರುತಿನ ಚೀಟಿ ಮತ್ತು ಮರಣ ಉತಾರವನ್ನು ನೋಡಿ ಬರೆಸಿರುತ್ತೇನೆ.

( ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಮ್.ಎಫ್.ಸಿ., ನ್ಯಾಯಾಲಯ, ಅಥಣಿ